# ಲೀಸಾ ಇಂಡಿಯಾ–ಓದುಗರ ಸಮೀಕ್ಷೆಯ ಫಲಿತಾಂಶ 2013

## ಕನ್ನಡ ಸಂಚಿಕೆ

ಲೀಸಾ ಇಂಡಿಯಾವು ಮೂರು ತಿಂಗಳಿಗೊಮ್ಮೆ ಪ್ರಕಟವಾಗುವ ಪತ್ರಿಕೆ. ಇದರ ಗುರಿ ಪಾರಿಸರಿಕ ಕೃಷಿಯನ್ನು ಲೀಸಾ ಪದ್ಧತಿಗಳ ಮೂಲಕ ಕೈಗೊಳ್ಳುವಂತೆ ಉತ್ತೇಜಿಸುವುದಾಗಿದೆ. ಮೊದಲಿಗೆ ವಿಶ್ವದಾದ್ಯಂತ ಪ್ರಸಾರವಿರುವ ಲೀಸಾ ಸಂಚಿಕೆಯೊಂದಿಗೆ ಉಪ ಪತ್ರಿಕೆಯಾಗಿ ಪ್ರಾರಂಭವಾಯಿತು. ಇಸವಿ 1999 ಬಳಿಕ ಭಾರತದಲ್ಲಿ ಒಂದು ಸ್ವತಂತ್ರ ಪತ್ರಿಕೆಯಾಗಿ ಹೊರಹೊಮ್ಮಿತು. ಭಾರತದಲ್ಲಿಯೇ ಪ್ರಕಟವಾಗತೊಡಗಿದ ಲೀಸಾ ಇಂಡಿಯಾ ಇಂಗ್ಲೀಷ್ ಪತ್ರಿಕೆಗೆ ಮೊದಲು ಓದುಗರ ಸಂಖ್ಯೆ ಸುಮಾರು 800 ಇತ್ತು. ಈಗ ಇದರ ಮುದ್ರಿತ ಹಾಗೂ ಡಿಜಿಟಲ್ ಪ್ರಕಟಣೆಗಳಿಗಿರುವ ಓದುಗರ ಸಂಖ್ಯೆ 7000 ದಾಟಿದೆ.

ಇಸವಿ 2009ರ ಬಳಿಕ ಲೀಸಾ ಇಂಡಿಯಾ ಕನ್ನಡ ಸಂಚಿಕೆಯನ್ನು ವರ್ಷಕ್ಕೆರಡು ಸಾರಿ ಪ್ರಕಟಿಸಲಾಗುತ್ತಿದೆ. ನೆಲಮೂಲದಲ್ಲಿ ಕೆಲಸ ಮಾಡುತ್ತಿರುವ ರೈತರು ಹಾಗೂ ಅಭಿವೃದ್ಧಿ ಕಾರ್ಯಕರ್ತರಿಗೆ ಈ ಸಂಚಿಕೆಯು ತಲುಪುತ್ತಿದೆ. ಮಿಸೇರಿಯರ ಸಂಸ್ಥೆಯು ಇದನ್ನು ಪ್ರಕಟಿಸಲು ಸಹಕಾರ ನೀಡುತ್ತಿದೆ. ಕನ್ನಡ ಸಂಚಿಕೆ ಪ್ರಕಟಣೆಯು ನಾಲ್ಕು ವರ್ಷಗಳನ್ನು ಪೂರೈಸುವುದರೊಂದಿಗೆ, ಇದರ ಉಪಯುಕ್ತತೆ ಕುರಿತು ಓದುಗರ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಇದು ಸೂಕ್ತ ಕಾಲ ಎಂಬುದು ನಮ್ಮ ಆಲೋಚನೆ.

ಈ ಓದುಗರ ಸಮೀಕ್ಷೆಯು 2013ರ ಆಗಸ್ಟ್ ತಿಂಗಳಿನಲ್ಲಿ ನಡೆಸಲಾಯಿತು. ಕಾರಣಗಳು ಹೊರಹೊಮ್ಮುವಂತಹ ಸರಳ ಪ್ರಶ್ನೆಗಳಿರುವ ಎರಡು ಪುಟಗಳ ಸಮೀಕ್ಷಾ ಪತ್ರಿಕೆಯನ್ನು ಓದುಗರಿಗೆ ಕಳುಹಿಸಿದ್ದೆವು. ಪ್ರತಿಕ್ರಿಯೆಯು ಅತ್ಯಂತ ಪ್ರೋತ್ಸಾಹದಾಯಕವಾಗಿತ್ತು. ನಮ್ಮ ಸಮೀಕ್ಷೆಗೆ ಸುಮಾರು ಶೇಕಡಾ ಐದರಷ್ಟು ಓದುಗರು ಪ್ರತಿಕ್ರಿಯಿಸಿದ್ದಾರೆ. ಅವರಿಗೆ ನಮ್ಮ ಮನಪೂರ್ವಕ ಧನ್ಯವಾದಗಳು. ಸಮೀಕ್ಷೆಯ ಫಲಿತಾಂಶವು ಈ ಕೆಳಗಿನಂತಿವೆ.

### ಸಮೀಕ್ಷೆಯ ಮುಖ್ಯಾಂಶಗಳು

- ಲೀಸಾ ಇಂಡಿಯಾವು ಆಸಕ್ತಿದಾಯಕವಾಗಿರಲು ಮುಖ್ಯ ಕಾರಣವೇನೆಂದರೆ, ಪರ್ಯಾಯ ಕೃಷಿ ಕುರಿತ ಮಾಹಿತಿ ಮತ್ತು ಅದರ ಕ್ಷೇತ್ರ ಆಧಾರಿತ ಅನುಭವ ಎನ್ನುವುದು ಸುಮಾರು ಶೇಕಡಾ 94ರಷ್ಟು ಪ್ರತಿಕ್ರಿಯಿಸಿದವರ ಅಭಿಪ್ರಾಯ.
- ಪ್ರತಿಕ್ರಿಯಿಸಿದವರಲ್ಲಿ ಶೇಕಡಾ 89ರಷ್ಟು ಲೀಸಾ ಇಂಡಿಯಾದ ವಿಚಾರಗಳನ್ನು ಅನೇಕ ಮಾರ್ಗಗಳಲ್ಲಿ ಬಳಸಿಕೊಳ್ಳುತ್ತಿದ್ದಾರೆ.
- ಪ್ರತಿಕ್ರಿಯಿಸಿದವರಲ್ಲಿ ಸುಮಾರು ಅರ್ಧದಷ್ಟು ಓದುಗರು, ರೈತರಿಗೆ ತರಬೇತಿ ನೀಡಲು ಉಪಯೋಗಿಸಿಕೊಂಡಿದ್ದಾರೆ.




- ಸುಮಾರು ಮೂರನೇ ಒಂದು ಪಾಲು ಪ್ರತಿಕ್ರಿಯೆದಾರರು ಕ್ಷೇತ್ರದಲ್ಲಿ ಚಟುವಟಿಕೆಗೋಸ್ಕರ ಬಳಸಿಕೊಳ್ಳುತ್ತಿದ್ದಾರೆ.
- ಸುಮಾರು ಮೂರನೇ ಎರಡು ಪಾಲು ಪ್ರತಿಕ್ರಿಯೆದಾರರು ಇದರ ವಿಚಾರಗಳನ್ನು ರೈತರೊಂದಿಗೆ ಮತ್ತು ಸಭೆಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ.
- ಜಿಲ್ಲಾಮಟ್ಟದ ಸಭೆಗಳನ್ನು ಸಂಘಟಿಸಲು ಮತ್ತು ರೈತರಿಗೆ ತರಬೇತಿ ನೀಡಲು ಸಂಚಿಕೆಗಳಲ್ಲಿರುವ ಸಲಹೆಗಳು ಲೀಸಾವನ್ನು ಇನ್ನಷ್ಟು ವಿಶಾಲವಾಗಿಸಿವೆ.

### ಲೀಸಾ ಪತ್ರಿಕೆ ಆಸಕ್ತಿದಾಯಕವಾಗಿದೆ ಏಕೆ?




ಸುಮಾರು ಶೇಕಡಾ 94ಷ್ಟು ಪ್ರತಿಕ್ರಿಯೆಗಳಲ್ಲಿ ಲೀಸಾ ಇಂಡಿಯಾವು ಕುತೂಹಲಕಾರಿಯಾಗಿದೆ ಎಂದಿದೆ. ಲೀಸಾ ಇಂಡಿಯಾವು ಪರ್ಯಾಯ ಕೃಷಿ ಕುರಿತ ಮಾಹಿತಿಗಳನ್ನು ನೀಡುತ್ತಿದೆ ಎಂಬುದು ಸುಮಾರು ಶೇಕಡಾ 80ರಷ್ಟು ಅಭಿಪ್ರಾಯ. ಸುಮಾರು ಶೇಕಡಾ 33ರಷ್ಟು ಪ್ರತಿಕ್ರಿಯೆಯಲ್ಲಿ ಇದು ಕ್ಷೇತ್ರವನ್ನು ಅಧ್ಯಯನ ಮಾಡಿದ ವಿಷಯಗಳಾದ ಕಾರಣ ಆಸಕ್ತಿಕರ ಎಂದಿದ್ದಾರೆ.

### ಲೀಸಾ ಇಂಡಿಯಾದ ಉಪಯುಕ್ತತೆ ಹೇಗೆ?

ತಾವು ಹೇಗೆ ಲೀಸಾ ಇಂಡಿಯಾದಲ್ಲಿರುವ ವಿಷಯಗಳನ್ನು ಬಳಸಿಕೊಳ್ಳುತ್ತಿದದೇನೆ ಎನ್ನುವ ಸುಮಾರು ಶೇಕಡಾ 89 ಪ್ರತಿಕ್ರಿಯೆಗಳ ಅಭಿಪ್ರಾಯ

ಶಿಕ್ಷಣಕ್ಕಾಗಿ ಮತ್ತು ತರಬೇತಿ ನೀಡಲು ಲೀಸಾ ಇಂಡಿಯಾವು ಒಂದು ಸಂಪನ್ಮೂಲ. ಸುಮಾರು ಶೇಕಡಾ 24 ಜನ ರೈತರಿಗೆ ತರಬೇತಿ ನೀಡಲು ಇದನ್ನು ಬಳಸಿಕೊಂಡಿದ್ದೇವೆ ಎಂದರೆ ಶೇಕಡಾ 22 ಜನ ಎನ್‌ಜಿಓಗಳಿಗೆ ತರಬೇತಿ ನೀಡಲು ಬಳಸಿಕೊಳ್ಳುವುದಾಗಿ ತಿಳಿಸಿದ್ದಾರೆ.

ಪ್ರಾಯೋಗಿಕ ಮಾರ್ಗದಲ್ಲೂ ಪರ್ಯಾಯ ಕೃಷಿ ಆಚರಣೆಗಳನ್ನು ಅಳವಡಿಸಿಕೊಳ್ಳಲು ಇಲ್ಲಿನ ವಿಷಯಗಳು ಉಪಯುಕ್ತ ಎಂಬುದು ಸುಮಾರು ಶೇಕಡಾ 52 ಪ್ರತಿಕ್ರಿಯೆದಾರರ ಅನುಭವ.




### ಲೀಸಾವು ಹರಡುತ್ತಿದೆ

ಹರಡುವಿಕೆಯ ಪರಿಣಾಮವು ಗಮನಾರ್ಹವಾಗಿದೆ. ಸಭೆಗಳಲ್ಲಿ, ತರಬೇತಿ ಹಾಗೂ ಕಾರ್ಯಾಗಾರಗಳಲ್ಲಿ ಪರಸ್ಪರ ಹಂಚಿಕೊಳ್ಳುವ ಪ್ರಮಾಣ ಸುಮಾರು ಶೇಕಡಾ 87ರಷ್ಟಿದೆ. ಸುಮಾರು ಶೇಕಡಾ 59ರಷ್ಟು ಪ್ರತಿಕ್ರಿಯೆಗಳಲ್ಲಿ ತಾವು ಸುಮಾರು ಒಬ್ಬರಿಂದ 35 ಜನರೊಂದಿಗೆ ವಿಷಯಗಳನ್ನು ಹಂಚಿಕೊಂಡಿದ್ದೇವೆಂದು ತಿಳಿಸಿದ್ದಾರೆ. ಅದು ಕೆಲವೊಮ್ಮೆ ವೈಯಕ್ತಿಕವಾಗಿ ಅಥವಾ ಸಣ್ಣ ಸಭೆ, ತರಬೇತಿ ಮತ್ತು ಒಕ್ಕೂಟ ಸೇರಿದಾಗ ಹಂಚಿಕೊಂಡಿದ್ದು. ಸುಮಾರು ಶೇಕಡಾ 15 ಪ್ರತಿಕ್ರಿಯೆಗಳಲ್ಲಿ ರೈತರ ದೊಡ್ಡ ಸಭೆಗಳಲ್ಲೂ ಲೀಸಾ ವಿಷಯಗಳನ್ನು ಹಂಚಿಕೊಂಡಿರುವುದಾಗಿ ತಿಳಿಸಿದ್ದಾರೆ.

### ಓದುಗರ ದೃಷ್ಟಿಯಲ್ಲಿ ಲೀಸಾ

- ಸಮಕಾಲೀನ ಕೃಷಿ ಅಭ್ಯುದಯಕ್ಕೆ ಇದೊಂದು ಅತ್ಯುತ್ತಮ ಮಾರ್ಗದರ್ಶಕ

  **– ಬರಗೇಶಪ್ಪ ಜಿ.ಕೆ., ರೈತ, ಧಾರವಾಡ**

- ಎನ್‌ಜಿಓಗಳಿಗೆ ಮಾರ್ಗಸೂಚಿ

  **– ವೀರಭಾಸ್ಕರ ಎಸ್.ಎಚ್. ಅಭಿವೃದ್ಧಿ ಕಾರ್ಯಕರ್ತ, ಮಾತೃಸಂಸ್ಥೆ, ಬಳ್ಳಾರಿ**

- ಲೀಸಾ ಜ್ಞಾನದ ಸಹಾಯದಿಂದ ಮತ್ತು ಇದು ರೈತರಿಗೆ ನೀಡುತ್ತಿರುವ ಒಳ್ಳೆಯ ಮಾರ್ಗದರ್ಶನದಿಂದ ಯಾರಾದರೂ ಯಶಸ್ವಿ ರೈತನಾಗಲು ಸಾಧ್ಯ.

  **– ನಾರಾಯಣಸ್ವಾಮಿ, ಅಭಿವೃದ್ಧಿ ಕಾರ್ಯಕರ್ತ, ಸರ್ಕಾರಿ ಕೃಷಿ ಕೇಂದ್ರ, ಕರ್ನಾಟಕ**

- ಕೃಷಿಯ ಹೊಸ ಅನುಶೋಧನೆಗಳನ್ನು ಪರಿಚಯಿಸುತ್ತಿದೆ.

  **– ಪರಮೇಶ್ವರನ್ ಎನ್., ಅಭಿವೃದ್ಧಿ ಕಾರ್ಯಕರ್ತ**

- ಸಾವಯವ ಕೃಷಿಗೆ ಹಾಗೂ ಉತ್ತಮ ಜೀವನ ನಿರ್ವಹಣೆಗೆ ಈ ಪತ್ರಿಕೆಯು ಅತ್ಯಂತ ಉಪಯುಕ್ತವಾಗಿದೆ.

  **– ಸಂಗನಗೌಡ, ರೈತ, ಡಿಂಡಿಗಲ್**


ಲೀಸಾ ಇಂಡಿಯಾ
LEISA INDIA
ಎ.ಎಮ್.ಇ. ಫೌಂಡೇಷನ್, ನಂ. 204, 100 ಫೀಟ್ ರಿಂಗ್‌ರೋಡ್, ಮೂರನೇ ಫ್ಲೇಸ್ ಬನಶಂಕರಿ ಎರಡನೇ ಬ್ಲಾಕ್, ಮೂರನೇ ಸ್ಟೇಜ್, ಬೆಂಗಳೂರು–560085 – ಇವರಿಂದ ಪ್ರಕಟಿತ